

ಸಂಜೆ ಮಾತ್ರ ಅನಾಥವಾಗಿದೆ

ನಮ್ಮ ನಡುವೆ ಅಗಾಧ ಮೌನ
ಹೆಚ್ಚೆಂದರೆ ಎರಡು ತುಂಡು ಮಾತು
ಹೌದು... ಇಲ್ಲ
ಆಯ್ತು... ಬಿಡು
ಪಾರ್ಕು ಸಾಗರ ತೀರ ಸಂಗಮ್ ಥೇಟರ್
ಹೊರ ಹೋಗದೆ ಎಷ್ಟು ದಿನಗಳಾದವು
ಸುಖದ ದುಮ್ಮಾನ ಹೀಗೂ

ಜನ್ಮ ಜನ್ಮಾಂತರಕ್ಕೆ ಬಳ್ಳಿಯಂತೆ ಚಾಚಿಕೊಂಡಿದ್ದೆವು
ಆಸೆ ಕಂಗಳು ಅರೆ ಮುಚ್ಚಿ
ಆಮೋದ ಸಲ್ಲಾಪ
ಅವೆಷ್ಟು ಜನ್ಮಗಳ ಜೀವಿಸಿದೆವು

ಈಗ–
ಬಾಯಿ ದುರ್ಗಂಧ ಎಂಬ ದೂರು
ತುಟಿಯೆಂಬುದು ಮಾಂಸದ ಎಸಳು
ನನಗೊಂದು ನಿನಗೊಂದು ಆಪ್ತ ಘಮಲು ಇತ್ತಲ್ಲ
ಅರೇ, ಮರೆವಿಗೆ ಜಾರಿ ಎಷ್ಟು ದಿನಗಳಾದವು



ಕಲೆ: ಡಿ.ಕೆ. ರಮೇಶ್

ಹಳೆಯ ಸರಕನ್ನೆಲ್ಲ ಕಿತ್ತು ಕಿತ್ತು ಜೋಡಿಸಿಡುತ್ತಿದ್ದೇನೆ
ಕಿಲುಬು ಹತ್ತಿದ್ದಾದರೂ ಹೇಗೆ
ಆಂಟಿಕ್ ಚೀಜ್‌ಗಳ ಕಿಮ್ಮತ್ತು
ಮಾರುಕಟ್ಟೆ ಜಮಾನದಲ್ಲಿ...
ಮಾರಿಕೊಂಡಿದ್ದೇವೆ ನಾವು ನಾವೇ

ಈಗೀಗ ಹಗಲು ದೀರ್ಘವಾಗುತ್ತಿದೆ
ರಾತ್ರಿ ಬೇಗ ಕಳೆದರೆ ಸಾಕು

ಕಡ ತಂದಷ್ಟು ಬೆಳದಿಂಗಳು
ಸಾಕಾಗಬಹುದು
ಇನ್ನೆರಡು ದಿನ

● **ಲಿಂಗರಾಜ ಸೊಟ್ಟಪ್ಪನವರ**